# ನವ ಪ್ರಭೆಯಲ್ಲಿ ನಭಾ



ಅಪಘಾತದ ನಂತರ ಸಿನಿಮಾದಿಂದ ದೂರವುಳಿದಿದ್ದ ವಜ್ರಕಾಯ ಬೆಡಗಿ, ಕನ್ನಡತಿ ನಭಾ ನಟೇಶ್ ಕಮ್‌ಬ್ಯಾಕ್ ಮಾಡಿದ್ದಾರೆ. ಎರಡು ವರ್ಷಗಳ ನಂತರ ಸಿನಿಮಾರಂಗಕ್ಕೆ ಮರಳಿದ್ದು, ಎರಡನೇ ಇನಿಂಗ್ಸ್ ಆರಂಭಿಸಿದ್ದಾರೆ. 'ಸ್ವಯಂಭು' ಹೆಸರಿನ ಪ್ಯಾನ್ ಇಂಡಿಯಾ ಸಿನಿಮಾದಲ್ಲಿ ನಟಿಸುತ್ತಿರುವ ಅವರು, ಮೊದಲಿಗಿಂತ ಹೆಚ್ಚಿನ ಆತ್ಮವಿಶ್ವಾಸದೊಂದಿಗೆ ಮರಳಿದ್ದಾರೆ. ಅವರೊಂದಿಗಿನ ಮಾತುಕತೆ ಇಲ್ಲಿದೆ.

◆ **ಎರಡು ವರ್ಷಗಳ ನಂತರ ನಟನೆಗೆ ಮರಳಿದ್ದೀರ. ಕಮ್‌ಬ್ಯಾಕ್ ಹೇಗನ್ನಿಸುತ್ತಿದೆ?**

ಸಿನಿಮಾಗೆ ವಾಪಸ್ ಬಂದಿರುವುದಕ್ಕೆ ತುಂಬಾ ಖುಷಿಯಾಗುತ್ತಿದೆ. ಭುಜದ ಪೆಟ್ಟಿನಿಂದಾಗಿ ಬ್ರೇಕ್ ತೆಗೆದುಕೊಂಡಿದ್ದೆ. ಇದೀಗ ಒಳ್ಳೆಯ ಸಿನಿಮಾ ಮೂಲಕ ಕಮ್‌ಬ್ಯಾಕ್ ಮಾಡುತ್ತಿರುವುದು ಎಕ್ಸೈಟಿಂಗ್ ಆಗಿದೆ. ನಾನು ನಟಿಸುತ್ತಿರುವ 'ಸ್ವಯಂಭು' ಸಿನಿಮಾದಲ್ಲಿ ನನ್ನ ಲುಕ್, ಹಾಗೇ ಕ್ಯಾರೆಕ್ಟರೈಸೇಷನ್ ತುಂಬಾ ಭಿನ್ನ. ಇದೊಂದು ಪೀರಿಯಾಡಿಕಲ್ ಡ್ರಾಮಾ. ನನ್ನ ಪಾತ್ರ ಕಥೆಯೊಂದಿಗೆ ಸುಂದರವಾಗಿ ಪಯಣಿಸುತ್ತದೆ. ಹೆಚ್ಚು ಚೇಂಜ್ ಓವರ್ ಇದೆ. ಕನ್ನಡ ಹಾಗೂ ತೆಲುಗಿನಲ್ಲಿ ಎಂಟೊಂಬತ್ತು ಸಿನಿಮಾಗಳಲ್ಲಿ ನಟಿಸಿದ್ದೇನೆ. ಮತ್ತೆ ಮತ್ತೆ ಒಂದೇ ರೀತಿಯ ಪಾತ್ರ ಮಾಡುವುದು ಇಷ್ಟ ಇರಲಿಲ್ಲ. ಕಮ್‌ಬ್ಯಾಕ್ ಆಗುವುದಾದರೆ ಒಳ್ಳೆಯ ಸಿನಿಮಾದೊಂದಿಗೆ ಆಗಬೇಕು ಎಂದು ನಿರ್ಧರಿಸಿದ್ದೆ. ಇದೀಗ ಆ ಕಾಲ ಬಂದಿದೆ.

◆ **ಈ ಅಂತರದಲ್ಲಿ ಏನೇನು ಹೊಸತನ್ನು ಕಂಡುಕೊಂಡಿರಿ?**

ಈ ಎರಡು ವರ್ಷಗಳ ಅಂತರದಲ್ಲಿ ನನ್ನ ಬಗ್ಗೆ ನಾನು ಸಾಕಷ್ಟು ವರ್ಕ್ ಮಾಡಿಕೊಂಡಿದ್ದೇನೆ. ನೃತ್ಯ, ನಟನೆಯಲ್ಲಿ ಇನ್ನಷ್ಟು ಪಳಗಿದ್ದೇನೆ. ನಟನೆಯ ವರ್ಕ್‌ಶಾಪ್‌ಗಳಿಗೆ ಹೋಗಿದ್ದೇನೆ. ನನ್ನಲ್ಲಿ ನಾನು ಬದಲಾವಣೆಗಳನ್ನು ಮಾಡಿಕೊಂಡಿದ್ದೇನೆ. ನಟನೆ, ಜೀವನದೆಡೆಗೆ ನನ್ನ ಅಪ್ರೋಚ್ ಸಂಪೂರ್ಣ ಬದಲಾಗಿದೆ. ಹಾಗೇ ನನ್ನ ಕರಿಯರ್ ನೋಡುವ ವಿಧಾನವೂ ಬದಲಾಗಿದೆ. ಇವೆಲ್ಲ ನನ್ನ ನಟನೆಯಲ್ಲಿ ಪ್ರತಿಫಲಿಸುತ್ತದೆ ಎಂದು ನಂಬಿದ್ದೇನೆ.

◆ **ಸಿನಿಮಾದಿಂದ ದೂರವುಳಿದಾಗ ಏನನ್ನು ಮಿಸ್ ಮಾಡಿಕೊಂಡಿರಿ?**

ಖಂಡಿತ ಸಿನಿಮಾವನ್ನೇ. ಕ್ಯಾಮೆರಾ ಮುಂದೆ ನಿಲ್ಲುವುದು, ಡೈಲಾಗ್ ಹೇಳುವುದು, ಸೆಟ್‌ಗಳಿಗೆ ಹೋಗುವುದು, ಪಾತ್ರವೇ ನಾನಾಗುವುದು, ಒಟ್ಟಾರೆ ಸಿನಿಮಾ ಪ್ರಪಂಚವನ್ನೇ ಮಿಸ್ ಮಾಡಿಕೊಂಡಿದ್ದೇನೆ. ಸಾಮಾಜಿಕ ಜಾಲತಾಣದಲ್ಲಿ ಯಾವಾಗಲೂ ಆ್ಯಕ್ಟಿವ್ ಆಗಿದ್ದೆ, ಆದರೂ ಸಿನಿಮಾ ಅನುಭವವೇ ಬೇರೆ. ಸಿನಿಮಾ ನನ್ನ ಪಾಲಿಗೆ